ಮಾಡಿದ್ದೀರಿ. Rural Development and PWD ಯಲ್ಲಿ ತಾರತಮ್ಯ ಮಾಡಿದ್ದೀರಿ. ಎಲ್ಲಾ ದೃಷ್ಟಿಯಿಂದ ಇವತ್ತಿನ ದಿವಸ ತಾರತಮ್ಯ ಮಾಡಿ ಶಾಸಕರುಗಳಿಗೆ ಮೋಸ ಮಾಡಿದ್ದೀರಿ. ನಿಜವಾಗಿಯೂ ಕೂಡ ಇದು ಸರಿಯಲ್ಲ. ಆದ್ದರಿಂದ, ಇದನ್ನು ಸರಿಪಡಿಸಿ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದನ್ನು ಸರಿಪಡಿಸದಿದ್ದರೆ, ಇದರ ಪರಿಣಾಮ ಸರಿ ಇರುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಮಾತನಾಡುವುದಕ್ಕೆ ತಾವು ಇಷ್ಟು ಸಮಯ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ ಕನಿಷ್ಠ ಈಗಲಾದರೂ ಪರಮಾತ್ಮ ಅಥವಾ ನಿಸರ್ಗವೋ ಅವರಿಗೆ ಒಳ್ಳೆಯ ಬುದ್ಧಿ ಕೊಟ್ಟು ಒಳ್ಳೆಯ ಬಜೆಟ್ ಮಾಡಿ ಇದನೆಲ್ಲಾ ಸರಿಪಡಿಸಲೆಂದು ಹೇಳುತ್ತೇನೆ. ಇಲ್ಲದಿದ್ದರೆ ಅವರ ಹಾದಿ ಅವರಿಗೆ, ನಮ್ಮ ಹಾದಿ ನಮಗೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ಧನ್ಯವಾದಗಳು.

2. ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತನಲ್ಲಿ ದಿನಾಂಕ 23.1.2009 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1)2009ನೇ ಸಾಲಿನ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ

2)2009ನೇ ಸಾಲಿನ ಕರ್ನಾಟಕ ದೇವದಾಸಿಯರ ಸಮರ್ಪಣ ನಿಷೇಧ (ತಿದ್ದುಪಡಿ)ವಿಧೇಯಕ

3)2009ನೇ ಸಾಲಿನ ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕ